RNU AIR DHARWAD

# APRIL 4,2025
# ALL INDIA RADIO- DHARWAD
# PRADESH SAMACHARA (KANNADA) 12PM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ವಕ್ಫ್ ತಿದ್ದುಪಡಿ ಮಸೂದೆ –2025 ಹಾಗೂ ಮುಸಲ್ಮಾನ ವಕ್ಫ್ ರದ್ದತಿ ಕಾಯ್ದೆ –1923 ರಾಜ್ಯಸಭೆಯಲ್ಲಿ 12 ಗಂಟೆಗಳ ಸುದೀರ್ಘ ಚರ್ಚೆಯ ಬಳಿಕ ಅಂಗೀಕಾರವಾಗಿದೆ. ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 'ಸಂಸತ್ತಿನ ಎರಡೂ ಸದನಗಳಲ್ಲಿ ವಕ್ಫ್ ತಿದ್ದುಪಡಿ ಮಸೂದೆ ಮತ್ತು ಮುಸಲ್ಮಾನ್ ವಕ್ಫ್ ರದ್ದತಿ ಮಸೂದೆ ಅಂಗೀಕಾರಗೊಂಡಿರುವುದು, ಸಮಾಜೋ–ಆರ್ಥಿಕ ನ್ಯಾಯ, ಪಾರದರ್ಶಕತೆ ಮತ್ತು ಎಲ್ಲರನ್ನೂ ಒಳಗೊಂಡ ಬೆಳವಣಿಗೆಗಿರುವ ಮಹತ್ವದ ಕ್ಷಣವಾಗಿದೆ. ಈ ಕಾನೂನುಗಳು ಧ್ವನಿ ಹಾಗೂ ಅವಕಾಶ ವಂಚಿತರಿಗೆ ಸಹಾಯ ಮಾಡಲಿವೆ ಎಂದಿದ್ದಾರೆ.**

<><><>

**ವಕ್ಫ್ ತಿದ್ದುಪಡಿ ಮಸೂದೆ ರಾಜ್ಯಸಭೆಯಲ್ಲಿ ಅಂಗೀಕಾರಗೊಂಡ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನ ಖಾತೆ ಸಚಿವರಾದ ಪ್ರಲ್ಹಾದ್ ಜೋಶಿ ಅವರು ವಕ್ಫ್ ಆಸ್ತಿಗಳನ್ನು ನಿರ್ವಹಿಸುವಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ಹೆಚ್ಚಿಸುವಲ್ಲಿ ಈ ಮಹತ್ವದ ಕಾನೂನು ದೊಡ್ಡ ಪಾತ್ರ ವಹಿಸಲಿದೆ, ಭಾರತದ ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಂಪರೆಯನ್ನು ರಕ್ಷಿಸಲಿದೆ ಎಂದಿದ್ದಾರೆ.**

<><><>

**ಸೃಜನಶೀಲತೆಗೆ ಮಾರಕವಾಗುವಷ್ಟು, ತಂತ್ರಜ್ಞಾನದ ವೈಭವೀಕರಣ ಸೂಕ್ತವಲ್ಲ. ತಂತ್ರಜ್ಞಾನಕ್ಕಿಂತ ಮನುಷ್ಯ ಜ್ಞಾನ ಪ್ರಜಾಸತ್ತೆ ಧ್ವನಿಸುತ್ತದೆ ಎಂದು, ಚಿಂತಕ ಪ್ರೊಫೆಸರ್ ಬರಗೂರು ರಾಮಚಂದ್ರಪ್ಪ ಹೇಳಿದ್ದಾರೆ. ಬೆಳಗಾವಿಯ, ಸಂಗೊಳ್ಳಿ ರಾಯಣ್ಣ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ, "ಹೊಸ ಸಹಸ್ರಮಾನದ ಧ್ವನಿಗಳು; ಸಮಕಾಲೀನ ಭಾರತದಲ್ಲಿ ಸಾಹಿತ್ಯ, ಸಮಾಜ ಮತ್ತು ಸಂಸ್ಕೃತಿ' ವಿಷಯ ಕುರಿತ, ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ, ಚಾಲನೆ ನೀಡಿ, ಅವರು ಮಾತನಾಡಿದರು.**

<><><>

**ಬೈಟ್: ಬರಗೂರು ರಾಮಚಂದ್ರಪ್ಪ 37 ಸೆಕೆಂದುಗಳು**

<><><>

ವಿಜಯನಗರ ಜಿಲ್ಲೆಯ, ಹಂಪಿಯಲ್ಲಿ ರಕ್ಷಣಾ ಸಚಿವಾಲಯದ, ಹಣಕಾಸು ಮತ್ತು ರಕ್ಷಣಾ ಲೆಕ್ಕಪತ್ರ ವಿಭಾಗದ, ಹಿರಿಯ ಅಧಿಕಾರಿಗಳು, ಸಮಗ್ರ ಹಣಕಾಸು ಸಲಹೆಗಾರರ ಸಮ್ಮೇಳನದಲ್ಲಿ, ಪಾಲ್ಗೊಂಡರು. ರಕ್ಷಣಾ ಲೆಕ್ಕಪತ್ರಗಳ ಮಹಾ ನಿಯಂತ್ರಕ, ಮಯಾಂಕ್ ಶರ್ಮಾ ಮಾತನಾಡಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ, ಮಹತ್ವಾಕಾಂಕ್ಷೆಯ 'ಸುಧಾರಣಾ ವರ್ಷ 2025' ಕ್ಕೆ ಅನುಗುಣವಾಗಿ, ಎಂಡ್ ಟು ಎಂಡ್ ಆಟೋಮೇಷನ್, ದತ್ತಾಂಶ ವಿಶ್ಲೇಷಣೆ ಮತ್ತು ಮಷೀನ್ ಲರ್ನಿಂಗ್ – ಚಾಲಿತ ಎಂ.ಐ.ಎಸ್. ಉಪಕ್ರಮ, "ಸಂಪೂರ್ಣ" ಯೋಜನೆ ಅನುಷ್ಠಾನದ ಬಗ್ಗೆ, ತಿಳಿಸಿದರು.

<><><>

ರಾಜ್ಯದಲ್ಲಿ ಕಳೆದ 15 ತಿಂಗಳಲ್ಲಿ 1 ಸಾವಿರದ 200 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬರ, ಬೆಳೆ ನಷ್ಟ ಮತ್ತು ಸಾಲದ ಹೊರೆಯಿಂದ ಹತಾಶೆಗೊಂಡಿದ್ದಾರೆ. ರೈತರ ಆತ್ಮಹತ್ಯೆ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕಾದ ಸರ್ಕಾರವು, ಸಾವಿನ ಪ್ರಕರಣಗಳನ್ನು ಸಂಪೂರ್ಣವಾಗಿ ತಳ್ಳಿಹಾಕಿದೆ ಎಂದು ವಿಧಾನಸಭೆ ವಿಪಕ್ಷ ಉಪ– ನಾಯಕ ಅರವಿಂದ ಬೆಲ್ಲದ ಖೇದ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಬರೆಹ ಹಂಚಿಕೊಂಡಿರುವ ಅವರು, 'ರೈತರನ್ನು ಬೆಂಬಲಿಸುವ ಬದಲು, ಕಾಂಗ್ರೆಸ್ ಸರ್ಕಾರ ಅವರ ನೋವನ್ನು ಅಣಕಿಸುತ್ತಿದೆ' ಎಂದಿದ್ದಾರೆ.

<><><>

"ಸುರಕ್ಷಿತ ಭವಿಷ್ಯಗಳು, ಇಲ್ಲಿಂದ ಪ್ರಾರಂಭವಾಗುತ್ತವೆ" ಎಂಬ ಧ್ಯೇಯದೊಂದಿಗೆ, ಅಂತಾರಾಷ್ಟ್ರೀಯ ಹೂತಿಟ್ಟ ಸ್ಫೋಟಕಗಳ ಜಾಗ್ರತಿ ದಿನವನ್ನು, ಇಂದು ಆಚರಿಸಲಾಗುತ್ತಿದೆ. ಅಂತಾರಾಷ್ಟ್ರೀಯ ಗಣಿ ಸ್ಫೋಟಕಗಳ ಬಗ್ಗೆ ಜಾಗೃತಿ ಮತ್ತು ಸ್ಫೋಟಕಗಳನ್ನು ನಿಷ್ಕ್ರಿಯಗೊಳಿಸಿ, ನಿರ್ವಹಿಸುವ ಪ್ರಕ್ರಿಯೆಯಲ್ಲಿ ಸಹಾಯ ಹಸ್ತ ಚಾಚುವ, ಮಹತ್ವ ಸಾರುವ ದಿನಾಚರಣೆ.

<><><>

ಉತ್ತರ ಕನ್ನಡ ಜಿಲ್ಲೆಯ, ಪ್ರವಾಸಿ ತಾಣಗಳನ್ನು ಪ್ರಚುರ ಪಡಿಸಲು, **'Discover the Beauty of india'** ಶೀರ್ಷಿಕೆ ಅಡಿ, **"Dekho Apna Desh Photo Contest"** ಸ್ಪರ್ಧೆ ಏರ್ಪಡಿಸಲಾಗಿದೆ. ವಿಶೇಷ ಸ್ಮಾರಕಗಳು, ವನ್ಯಜೀವಿ, ಗ್ಲೋಬಲ್ ಇಂಡಿಕೇಶನ್ ಟ್ಯಾಗ್ ಹೊಂದಿರುವ, ಕರಕುಶಲ ಮತ್ತು ಕೈಮಗ್ಗ, ಭೂಮಿಯ ದೃಶ್ಯ, ಸಾಹಸ ಪ್ರವಾಸೋದ್ಯಮ ವಿಭಾಗಗಳಲ್ಲಿ, ಅತ್ಯುತ್ತಮ ಛಾಯಾಚಿತ್ರಗಳನ್ನು, ಈ ತಿಂಗಳ 7ರೊಳಗೆ, **Dekho'apna desh' photos'@gmail.com** ಗೆ ಕಳುಹಿಸಲು, ಕೇಂದ್ರ ಪ್ರವಾಸೋದ್ಯಮ ಇಲಾಖೆ ಕೋರಿದೆ.

<><><>

ಕೇಂದ್ರ ರಕ್ಷಣಾ ಖಾತೆ ಸಚಿವರಾದ ರಾಜನಾಥ್ ಸಿಂಗ್ ನಾಳೆ ಕಾರವಾರದ ಐ.ಎನ್.ಎಸ್ ಕದಂಬ ನೌಕನೆಲೆಗೆ ಆಗಮಿಸಲಿದ್ದಾರೆ. ಈ ಸಂದರ್ಭ ಅವರು ಇಂಡಿಯನ್ ಓಶಿಯನ್ ಶಿಪ್ 'ಸಾಗರ' ಕ್ಕೆ ಚಾಲನೆ ನೀಡಲಿದ್ದಾರೆ ಹಾಗೂ ಸೀ ಬರ್ಡ್ ನ ವಿವಿಧ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ ಎಂದು ನೌಕಾದಳದ ಪ್ರಕಟಣೆ ತಿಳಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

<><><>